ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/101/ಮುವೇಬ/ಸೇ.ವಿ.-1/2015-16/ಸೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು. ದಿನಾಂಕ: 15.11.2016

ಇವರಿಗೆ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಮಾನ್ಯರೆ,

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು, ಸಹ/ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ಬೋಧಕರು ಇವರುಗಳು ಸೇವಾ ಪೂರ್ವ ಮತ್ತು ಸೇವಾ ಅವಧಿಯಲ್ಲಿ ಪಿಹೆಚ್.ಡಿ/ ಎಂ.ಫಿಲ್., ಪದವಿ ಪಡೆದ ಪ್ರಯುಕ್ತ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ಆದೇಶ ಸಂಖ್ಯೆ: ಇಡಿ 37 ಯುಎನ್ಇ 2009 ದಿ:24-12-2009
2) ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 200 ಯುಎನ್ಇ 2003 ದಿ:19-09-2007
3) ಸರ್ಕಾರದ ಪತ್ರ ಸಂಖ್ಯೆ: ಇಡಿ 242 ಡಿಸಿಇ 2011 ದಿ:19-12-2011 ಮತ್ತು 05-5-2015
4) ಇಲಾಖೆಯ ಆದೇಶ ಸಂಖ್ಯೆ:ಕಾಶಿಇ 199 ಮುವೇಬ ಸೇವಿ-1 2010-11 ದಿ:28-5-2015
5) ಇಲಾಖೆಯ ಆದೇಶ ಸಂಖ್ಯೆ:ಕಾಶಿಇ 263 ಪಿಹೆಚ್.ಡಿ/ ಎಂ.ಫಿಲ್., ಮುವೇಬ 2015-16 ಸೇವಿ-1 ದಿ:29-7-2015, 2-11-2015
6) ಇಲಾಖೆಯ ಆದೇಶ ಸಂಖ್ಯೆ:ಕಾಶಿಇ 263 ಪಿಹೆಚ್.ಡಿ/ ಎಂ.ಫಿಲ್., ಮುವೇಬ 2015-16 ಸೇವಿ-1(ಭಾಗ-2), ದಿ:3-12-2015 ಮತ್ತು 8-12-2015
7) ಇಲಾಖೆಯ ಆದೇಶ ಸಂಖ್ಯೆ:ಕಾಶಿಇ 515 ಪಿಹೆಚ್.ಡಿ/ ಎಂ.ಫಿಲ್., ಮುವೇಬ 2015-16 ಸೇವಿ-1, ದಿ:18-4-2016.
8) ಇಲಾಖೆಯ ಆದೇಶ ಸಂಖ್ಯೆ:ಕಾಶಿಇ 263 ಪಿಹೆಚ್.ಡಿ/ ಎಂ.ಫಿಲ್., ಮುವೇಬ 2015-16 ಸೇವಿ-1(ಭಾಗ-3), ದಿ:21.09.2016.
9) ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿನಾಂಕ:04-07-2016 ಮತ್ತು 22.09.2016.

****

ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು, ಸಹ/ ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ಬೋಧಕರು ಇವರುಗಳು ಸೇವಾ ಪೂರ್ವ ಮತ್ತು ಸೇವಾ ಅವಧಿಯಲ್ಲಿ ಪಿಹೆಚ್.ಡಿ/ ಎಂ.ಫಿಲ್., ಪದವಿ ಪಡೆದ ಪ್ರಯುಕ್ತ ಮುಂಗಡ ವೇತನ ಬಡ್ತಿಗಳಿಗೆ ಸಂಬಂಧಿಸಿದಂತೆ ಇಲಾಖೆಯು ಉಲ್ಲೇಖ(1) ರಿಂದ (3)ರವರೆಗಿನ ಸರ್ಕಾರಿ ಆದೇಶ/ ಸುತ್ತೋಲೆ/ ಪತ್ರಗಳಲ್ಲಿ ನೀಡಿರುವ ಅಂಶಗಳನ್ವಯ ಇಲಾಖೆಯು ಉಲ್ಲೇಖ(4)ರಲ್ಲಿ ಇಲಾಖೆಯ ವ್ಯಾಪ್ತಿಗೊಳಪಡುವ ಸರ್ಕಾರಿ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಯುಜಿಸಿ ವೇತನ ಪಡೆಯುತ್ತಿರುವ ಬೋಧಕರುಗಳು ನೇಮಕಾತಿ ಪೂರ್ವದಲ್ಲಿ ಅಥವಾ ಸೇವಾ ಅವಧಿಯಲ್ಲಿ ಪಿಹೆಚ್.ಡಿ/ಎಂ.ಫಿಲ್., ಪದವಿಯನ್ನು ಹೊಂದಿದಲ್ಲಿ ನಿಯಮಗಳನ್ವಯ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಪಡಿಸಲು ಚೆಕ್ ಲಿಸ್ಟ್(1) ಮತ್ತು (2)ರಲ್ಲಿಯ ವಿವರಗಳಿಗೆ ಅನುಸಾರವಾಗಿ ದಾಖಲೆಗಳನ್ನು ಸಲ್ಲಿಸುವಂತೆ, ಇಲಾಖೆಯ ಎಲ್ಲಾ ಸರ್ಕಾರಿ/ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗಳಿಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಸದರಿ ಸೂಚನೆಯನ್ವಯ ಬಂದಿರುವ

ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿ, ಈ ಇಲಾಖೆಯು ಉಲ್ಲೇಖ(5) ರಿಂದ (8)ರವರೆಗಿನ ಆದೇಶಗಳಲ್ಲಿ ಪ್ರಾಂಶುಪಾಲರುಗಳು, ಸಹ/ ಸಹಾಯಕ ಪ್ರಾಧ್ಯಾಪಕರು, ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ಬೋಧಕರು ಇವರುಗಳು ಸೇವಾ ಪೂರ್ವ ಮತ್ತು ಸೇವಾ ಅವಧಿಯಲ್ಲಿ ಪಿಹೆಚ್.ಡಿ/ಎಂ.ಫಿಲ್., ಪದವಿ ಪಡೆದವರಿಗೆ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 37 ಯುಎನ್‌ಇ 2009 ದಿ:24-12-2009ರ Appendix-IVರಲ್ಲಿ ಸಹಾಯಕ ಪ್ರಾಧ್ಯಾಪಕರು ನೇಮಕಾತಿ ಪೂರ್ವದಲ್ಲಿ ಪಿಹೆಚ್.ಡಿ/ ಎಂ.ಫಿಲ್., ಪದವಿಗಳನ್ನು ಪಡೆಯಲು ಹಾಗೂ ಸೇವಾ ಅವಧಿಯಲ್ಲಿ ಪಿಹೆಚ್.ಡಿ/ ಎಂ.ಫಿಲ್., ಪಡೆದ "Teachers" ಇವರಿಗೆ ಮುಂಗಡ ವೇತನ ಬಡ್ತಿಗಳನ್ನು ನೀಡಲು ನಿರ್ದೇಶನ ನೀಡಲಾಗಿದೆ. ಆದರೆ ಸಹ ಪ್ರಾಧ್ಯಾಪಕರು ಎಂದು ಪ್ರಸ್ತಾಪ ಇರುವುದಿಲ್ಲ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ(ಹೆಚ್.ಆರ್.ಎಂ.ಎಸ್.), ಇ-ಆಡಳಿತ ಕೇಂದ್ರ, ಬೆಂಗಳೂರು, ಇವರು ಸಹ ಪ್ರಾಧ್ಯಾಪಕರು ಎಂಬ ಹುದ್ದೆಯ ಬಗ್ಗೆ ಆದೇಶವಾದಲ್ಲಿ ಸದರಿಯವರುಗಳಿಗೆ ಮುಂಗಡ ವೇತನ ಬಡ್ತಿಗಳನ್ನು ತಂತ್ರಾಂಶದಲ್ಲಿ ರೂಪಿಸಲಾಗುವುದು ಎಂದು ತಿಳಿಸಿರುತ್ತಾರೆ.

ಇಲಾಖೆಯ ಬೋಧಕರುಗಳಿಗೆ ಪಿಹೆಚ್.ಡಿ/ ಎಂ.ಫಿಲ್., ಪದವಿ ಪಡೆದ ಹಿನ್ನಲೆಯಲ್ಲಿ ಮುಂಗಡ ವೇತನ ಬಡ್ತಿಗಳನ್ನು ಸರ್ಕಾರದ ಆದೇಶ ದಿನಾಂಕ:24-12-2009ರ Appendix-IVರಲ್ಲಿ ಸಹಾಯಕ ಪ್ರಾಧ್ಯಾಪಕರು ನೇಮಕಾತಿ ಪೂರ್ವದಲ್ಲಿ ಪಿಹೆಚ್.ಡಿ/ ಎಂ.ಫಿಲ್., ಪದವಿಗಳನ್ನು ಪಡೆಯಲು ಹಾಗೂ ಸೇವಾ ಅವಧಿಯಲ್ಲಿ ಪಿಹೆಚ್.ಡಿ/ಎಂ.ಫಿಲ್., ಪಡೆದ "Teachers" ಇವರಿಗೆ ಮುಂಗಡ ವೇತನ ಬಡ್ತಿಗಳನ್ನು ನೀಡಲು ನಿರ್ದೇಶನ ನೀಡಲಾಗಿದೆ. ಹಾಗೂ ಸರ್ಕಾರದ ಪತ್ರ ಸಂಖ್ಯೆ:ಇಡಿ:242:ಡಿಸಿಇ:2011, ದಿನಾಂಕ:05-05-2015ರಲ್ಲಿ ಪ್ರಾಂಶುಪಾಲರು/ಪ್ರಾಧ್ಯಾಪಕರುಗಳು/ದೈಹಿಕ ಶಿಕ್ಷಣ ಬೋಧಕರುಗಳು/ಗ್ರಂಥಪಾಲಕರು ಇವರುಗಳಿಗೆ ಪಿಹೆಚ್.ಡಿ/ ಎಂ.ಫಿಲ್., ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಕೆಲವೊಂದು ಷರತ್ತುಗಳನ್ನು ವಿಧಿಸಿ ನಿರ್ದೇಶನ ನೀಡಲಾಗಿದೆ.

ಈ ಬಗ್ಗೆ ಪರಿಶೀಲಿಸಲಾಗಿ ಸರ್ಕಾರದ ಆದೇಶ ದಿನಾಂಕ:24-12-2009 Appendix-IV ರ ಉಪಕಂಡಿಕೆ (iV) ರಿಂದ (Viii) ಮತ್ತು (Xiii) ರಿಂದ (XXVi) ರವರೆಗೆ "Teachers" ಎಂದು ನಮೂದನೆಯಾಗಿರುತ್ತದೆ ಮತ್ತು ಸರ್ಕಾರದ ಪತ್ರ ದಿನಾಂಕ:05-05-2016ರ ಅನ್ವಯ ಇಲಾಖೆಯ ಬೋಧಕರುಗಳು ಪ್ರಾಂಶುಪಾಲರು/ ಪ್ರಾಧ್ಯಾಪಕರುಗಳು/ದೈಹಿಕ ಶಿಕ್ಷಣ ಬೋಧಕರುಗಳು/ಗ್ರಂಥಪಾಲಕರು ಎಂದು ನಮೂದನೆಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಇಲಾಖೆಯ ಬೋಧಕರುಗಳು ಹಂತ ಹಂತವಾಗಿ (ಪದೋನ್ನತಿ/ಸ್ಥಾನೀಕರಣದೊಂದಿಗೆ) ಕಾರ್ಯ ನಿರ್ವಹಿಸುತ್ತಿರುವ ವಿವಿಧ ಹುದ್ದೆಗಳಾದ ಪ್ರಾಂಶುಪಾಲರು, ಸಹ ಪ್ರಾಧ್ಯಾಪಕರುಗಳು, ಸಹಾಯಕ ಪ್ರಾಧ್ಯಾಪಕರುಗಳು ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಗ್ರಂಥಪಾಲರುಕರು ಇವರುಗಳು ಪಿಹೆಚ್.ಡಿ/ಎಂ.ಫಿಲ್., ಪದವಿಯನ್ನು ಪಡೆದಲ್ಲಿ ಮುಂಗಡ ವೇತನ ಬಡ್ತಿಗಳನ್ನು Non-Compoundable ಮಂಜೂರಾತಿಗೆ ಅರ್ಹರಾಗಿರುತ್ತಾರೆಂದು ತಿಳಿಸುತ್ತಾ, ಈಗಾಗಲೇ ಈ ಕಛೇರಿಯ ಹಲವಾರು ಆದೇಶಗಳಲ್ಲಿ ಪ್ರಾಂಶುಪಾಲರು, ಸಹ ಪ್ರಾಧ್ಯಾಪಕರುಗಳು, ಸಹಾಯಕ ಪ್ರಾಧ್ಯಾಪಕರುಗಳು, ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಗ್ರಂಥಪಾಲರುಕರು, ಇವರುಗಳು ಪಡೆದಿರುವ ಪಿಹೆಚ್.ಡಿ/ಎಂ.ಫಿಲ್. ಪದವಿಗಳಿಗೆ ಮುಂಗಡ ವೇತನ ಬಡ್ತಿಗಳಿಗೆ ಮಂಜೂರಾತಿ ನೀಡಿರುವುದಕ್ಕೆ ಹೆಚ್.ಆರ್.ಎಂ.ಎಸ್ ನ ತಂತ್ರಾಂಶದಲ್ಲಿ ಅಳವಡಿಸಿ ಸದರಿ ಮುಂಗಡ ವೇತನ ಬಡ್ತಿಗಳಿಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ(ಹೆಚ್.ಆರ್.ಎಂ.ಎಸ್.), ಇ-ಆಡಳಿತ ಕೇಂದ್ರ, ಬೆಂಗಳೂರು, ಇವರನ್ನು ಕೋರಿದ್ದು, ಸದರಿ ಇ-ಆಡಳಿತ ಕೇಂದ್ರವು ಇಲಾಖೆಯ ಸಹ ಪ್ರಾಧ್ಯಾಪಕರು ಪಿಹೆಚ್.ಡಿ/ ಎಂ.ಫಿಲ್., ಪದವಿಗಳಿಗೆ ಮುಂಗಡ ವೇತನ ಬಡ್ತಿಗಳನ್ನು ನೀಡಲು ನಿಖರವಾದ ಸರ್ಕಾರಿ ಆದೇಶ ಇಲ್ಲವೆಂದು ತಿಳಿಸಿರುವ ಮೇರೆಗೆ ಈಗಾಗಲೇ ಸಹ ಪ್ರಾಧ್ಯಾಪಕರುಗಳಿಗೆ ಮಂಜೂರು ಮಾಡಿರುವ ಪಿಹೆಚ್.ಡಿ/ಎಂ.ಫಿಲ್., ಪದವಿ ಮುಂಗಡ ಬಡ್ತಿಗಳಿಗೆ ಹಾಗೂ ಮಂಜೂರು ಮಾಡಲಾಗುವ ಮುಂಗಡ ವೇತನ ಬಡ್ತಿಗಳನ್ನು ಹೆಚ್.ಆರ್.ಎಂ.ಎಸ್ ನ ತಂತ್ರಾಂಶದಲ್ಲಿ ಅಳವಡಿಸಬೇಕೆಂದು ಇ-ಆಡಳಿತ ಕೇಂದ್ರಕ್ಕೆ ನಿರ್ದೇಶನ ನೀಡಲು ಸರ್ಕಾರವನ್ನು ಕೋರಲಾಗಿದ್ದು, ಮತ್ತೊಮ್ಮೆ ಸರ್ಕಾರದ ಗಮನಕ್ಕೆ ತರಲಾಗಿದೆ.

ತಮ್ಮ ವಿಶ್ವಾಸಿ,

Sulpan

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

**ಪ್ರತಿ:-**

1. ಮಾಹಿತಿ ಅಧಿಕಾರಿಗಳು ಹಾಗೂ ನೋಡಲ್ ಆಫೀಸರ್ (ಹೆಚ್.ಆರ್.ಎಂ.ಎಸ್.), ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ – ಸದರಿ ಪತ್ರವನ್ನು ಸರ್ಕಾರದಲ್ಲಿ ಅನುಸರಣೆ ಮಾಡುವುದು.
2. ಮ್ಯಾನೇಜರ್, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ – ಸದರಿ ಪತ್ರವನ್ನು ಸರ್ಕಾರದಲ್ಲಿ ಅನುಸರಣೆ ಮಾಡುವುದು.
3. ಕಛೇರಿ ಪ್ರತಿ